**NEWSPAPER CLIPPINGS: CMRIT students bag 2nd Prize at NATIONAL LEVEL BCIC ACCELATHON 2.0**

**DATE: 05-12-2020**
**Publication: Prajavani Page -02**

## ಅಂತರ್ಜಲ ಪತ್ತೆ ಹಚ್ಚಲು ಸ್ಮಾರ್ಟ್ ಅಪ್ಲಿಕೇಷನ್ ತಯಾರಿಕೆ

# ರಾಷ್ಟ್ರಮಟ್ಟದ ಆನ್‌ಲೈನ್ ಹ್ಯಾಕಥಾನ್: ಸಿಎಂಆರ್ ತಾಂತ್ರಿಕ ಕಾಲೇಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಆನ್‌ಲೈನ್ ಹ್ಯಾಕಥಾನ್ (ಅಕ್ಸೆಲಾಥನ್ 2.0) ಸ್ಪರ್ಧೆಯಲ್ಲಿ ನಗರದ ಸಿಎಂಆರ್ ತಾಂತ್ರಿಕ ಕಾಲೇಜು (ಸಿಎಂಆರ್‌ಐಟಿ) ದ್ವಿತೀಯ ಬಹುಮಾನ ಪಡೆದಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ಮಹಾ ವಿದ್ಯಾಲಯ (ವಿಟಿಯು) ಸಹಯೋಗದಲ್ಲಿ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಈ ಆನ್‌ಲೈನ್ ಹ್ಯಾಕಥಾನ್ ಸ್ಪರ್ಧೆಯಲ್ಲಿ 18 ರಾಜ್ಯಗಳ 40ಕ್ಕೂ ಹೆಚ್ಚು ಕಾಲೇಜುಗಳು ಪಾಲ್ಗೊಂಡಿದ್ದವು. ಈ ಕಾಲೇಜುಗಳ 92 ತಂಡಗಳ 400 ವಿದ್ಯಾರ್ಥಿಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಿದ್ದವು.

‘ತಂತ್ರಜ್ಞಾನವನ್ನು ಬಳಸುವಲ್ಲಿ ಸಾಮಾಜಿಕ ನಾವೀನತ್ಯೆ’ ಎಂಬ ವಿಷಯದ ಮೇಲೆ ಸಿಎಂಆರ್‌ಐಟಿ ವಿದ್ಯಾರ್ಥಿಗಳ ತಂಡವು ಅಂತರ್ಜಲವನ್ನು ಪತ್ತೆ ಹಚ್ಚಲು ಸ್ಮಾರ್ಟ್ ಅಪ್ಲಿಕೇಶನ್ ಅಭಿವೃದ್ಧಿ ಪಡಿಸಿದ್ದಕ್ಕಾಗಿ ದ್ವಿತೀಯ ಬಹುಮಾನ ಪಡೆಯಿತು.



ವಿದ್ಯಾರ್ಥಿಗಳೊಂದಿಗೆ ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ್ ಜೈನ್

ಈ ಸಾಧನವು ಆಳ ಮತ್ತು ಬಂಡೆಯ ಪದರಗಳ ನಡುವೆ ಇರುವ ಅಂತರ್ಜಲವನ್ನು ಸುಲಭವಾಗಿ ಪತ್ತೆ ಹಚ್ಚುತ್ತಿದೆ. ಇದರಿಂದ ರೈತರಿಗೆ ಹೆಚ್ಚು ಪ್ರಯೋಜನವಾಗಲಿದೆ. ಜೊತೆಗೆ ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿ ಉಪಗ್ರಹ ದತ್ತಾಂಶವನ್ನು ಮ್ಯಾಪಿಂಗ್ ಮಾಡುವುದರಿಂದ ಗ್ರಾಮ ಪಂಚಾಯಿತಿ ಮಟ್ಟದ ನೀರಿನ ಸಂರಕ್ಷಣೆ ಕಾರ್ಯವನ್ನು ಬಲಗೊಳಿಸುತ್ತದೆ.

ಕಾಲೇಜಿನ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ 3 ಮತ್ತು 4ನೇ ವರ್ಷದ ವಿದ್ಯಾರ್ಥಿಗಳಾದ ಯಶವಂತ್ ಜೈನ್, ಪ್ರತೀಕ್, ಮುಖೇಶ್ ಭರೂಕ, ವೈಷ್ಣವಿ ಪಾಟೀಲ, ಅರ್ಪಣ್, ಅಭಿಷೇಕ್ ಮತ್ತು ಪಿ. ಮೀರಾ ಕೃಷ್ಣ ಅವರನ್ನೊಳಗೊಂಡ ತಂಡ ಈ ಸಾಧನವನ್ನು ವಿನ್ಯಾಸಗೊಳಿಸಿದೆ.

ವಿದ್ಯಾರ್ಥಿಗಳ ಈ ಪ್ರಯತ್ನವನ್ನು ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ್ ಜೈನ್ ಹಾಗೂ ಅಧ್ಯಾಪಕರು ಶ್ಲಾಘಿಸಿದ್ದಾರೆ.

**DATE: 05-12-2020**
**Publication: Sanjevani Page -05**

ಸಂಜೆವಾಣಿ



ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಆನ್ ಲೈನ್ ಹ್ಯಾಕಥಾನ್ ಸ್ಪರ್ಧೆಯಲ್ಲಿ ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯವು ದ್ವಿತೀಯ ಬಹುಮಾನ ಪಡೆದಿದೆ. ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಜೈನ್, ವಿದ್ಯಾರ್ಥಿಗಳಾದ ಯಶ್ವಂತ್ ಜೈನ್, ಪ್ರತೀಕ್, ಮುಖೇಶ್ ಭರೂಕ, ವೈಷ್ಣವಿ ಪಾಟೀಲ್, ಅರ್ಪಣ್ ಅಭಿಷೇಕ್, ಪಿ. ಮೀರಾಕೃಷ್ಣ ಇದ್ದಾರೆ.

**DATE: 05-12-2020**
**Publication: Ee sanje Page -07**

# ರಾಷ್ಟ್ರಮಟ್ಟದ ಹ್ಯಾಕಥಾನ್‌ನಲ್ಲಿ ಸಿಎಂಆರ್‌ಐಟಿಗೆ ಪ್ರಶಸ್ತಿಯ ಗರಿ



**ಬೆಂಗಳೂರು, ಡಿ.5-** ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯವು ರಾಷ್ಟ್ರೀಯ ಮಟ್ಟದಆನ್‌ಲೈನ್ ಹ್ಯಾಕಥಾನ್ (ಅಕ್ಸೆಲಾಥನ್ 2.0) ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನಗೆಲ್ಲುವ ಮೂಲಕ ಮೆಚ್ಚುಗೆ ಪಡೆದಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಸಹಯೋಗದಲ್ಲಿ ಬೆಂಗಳೂರು ಚೇಂಬರ್‌ಆಫ್ ಇಂಡಸ್ಟ್ರಿ ಅಂಡ್‌ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಈ ಆನ್‌ಲೈನ್ ಹ್ಯಾಕಥಾನ್ ಸ್ಪರ್ಧೆಯಲ್ಲಿ 18 ರಾಜ್ಯಗಳ 40ಕ್ಕೂ ಹೆಚ್ಚು ಕಾಲೇಜುಗಳನ್ನೊಳಗೊಂಡ 92 ತಂಡಗಳ 400 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತಂತ್ರಜ್ಞಾನವನ್ನು ಬಳಸುವಲ್ಲಿ ಸಾಮಾಜಿಕ ನಾವಿನತ್ಯೆ ಎಂಬ ಹ್ಯಾಕಥಾನ್ ವಿಷಯದ ಮೇಲೆ ಸಿಎಂಆರ್‌ಐಟಿ ವಿದ್ಯಾರ್ಥಿಗಳ ತಂಡವುಕೋಡ್‌ಇಕೋಅಂತರ್ ಜಲ ನೀರನ್ನು ಪತ್ತೆ ಹಚ್ಚಲು ಸ್ಮಾರ್ಟ್ ಅಪ್ಲಿಕೇಶನ್ ಸಾಧನ ಅಭಿವೃದ್ಧಿ ಪಡಿಸಿ ಬಹುಮಾನ ಮುಡಿಗೇರಿಸಿಕೊಂಡಿದೆ. ಈ ಸಾಧನ ಸುಲಭವಾಗಿ ನೀರಿನ ಆಳ ಮತ್ತು ಬಂಡೆಯ ಪದರಗಳ ನಡುವೆ ಇರುವ ಅಂತರ್ ಜಲವನ್ನು ಪತ್ತೆ ಹಚ್ಚಿ ರೈತರಿಗೆ ಉಪಯುಕ್ತವಾಗಲಿದೆ. ಜೊತೆಗೆ ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿ ಉಪಗ್ರಹ ದತ್ತಾಂಶವನ್ನು ಮ್ಯಾಪಿಂಗ್ ಮಾಡುವುದರಿಂದ ಗ್ರಾಮ ಮಟ್ಟದ ನೀರಿನ ಸಂರಕ್ಷಣೆಯನ್ನು ಶಕ್ತಗೊಳಿಸುತ್ತದೆ. ಈ ಮೂಲಕ ರೈತರಿಗೆ ಮತ್ತು ಸಮುದಾಯಕ್ಕೆ ಸಹಾಯ ಮಾಡುವ ಮಹತ್ವದ ಗುರಿಹೊಂದಿದ್ದು ರೈತರ ಬದುಕಿಗೆ ಈ ಸಾಧನವು ಸಹಾಯವಾಗಲಿದೆ.

ಸಿಎಂಆರ್‌ಐಟಿ ತಂಡವು ಆವಿಷ್ಕರಿಸಿರುವ ಈ ಸಾಧನವು ಕೃಷಿ ಸಮುದಾಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ ಎಂದು ಹ್ಯಾಕಥಾನ್ ಸ್ಪರ್ಧೆಯತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ. ಈಸಾಧನವನ್ನು ಕಾಲೇಜಿನ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ 3 ಮತ್ತು 4ನೇ ವರ್ಷದ ವಿದ್ಯಾರ್ಥಿಗಳಾದ ಯಶ್ವಂತ್‌ಜೈನ್, ಪ್ರತೀಕ್, ಮುಖೇಶ್ ಭರೂಕ, ವೈಷ್ಣವಿ ಪಾಟೀಲ್. ಅರ್ಪಣ್ ಅಭಿಷೇಕ್ ಮತ್ತು ಪಿ ಮೀರಾಕೃಷ್ಣ ಅವರನ್ನೊಳಗೊಂಡ ತಂಡ ವಿನ್ಯಾಸಗೊಳಿಸಿದೆ. ವಿದ್ಯಾರ್ಥಿಗಳ ಈ ಪ್ರಯತ್ನವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಜಯ್‌ಜೈನ್ ಹಾಗೂ ಅಧ್ಯಾಪಕರು ಶ್ಲಾಘಿಸಿದ್ದಾರೆ.

**DATE: 06-12-2020**
**Publication: Vartha Prabha Page -04**

# ರಾಷ್ಟ್ರಮಟ್ಟದ ಹ್ಯಾಕಥಾನ್‌ನಲ್ಲಿ ಸಿಎಂಆರ್‌ಐಟಿಗೆ ಪ್ರಶಸ್ತಿಯ ಗರಿ



ನಗರ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯವು ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಆನ್‌ಲೈನ್ ಹ್ಯಾಕಥಾನ್ (ಅಕ್ಸೆಲಾಥನ್ 2.0) ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗೆಲ್ಲುವ ಮೂಲಕ ಮೆಚ್ಚುಗೆ ಪಡೆದಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಸಹಯೋಗದಲ್ಲಿ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಈ ಆನ್‌ಲೈನ್ ಹ್ಯಾಕಥಾನ್ ಸ್ಪರ್ಧೆಯಲ್ಲಿ 18 ರಾಜ್ಯಗಳ 40ಕ್ಕೂ ಹೆಚ್ಚು ಕಾಲೇಜುಗಳನ್ನೊಳಗೊಂಡ 92 ತಂಡಗಳ 400 ವಿದ್ಯಾರ್ಥಿಗಳು ಈ ಹ್ಯಾಕಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

'ತಂತ್ರಜ್ಞಾನವನ್ನು ಬಳಸುವಲ್ಲಿ ಸಾಮಾಜಿಕ ನಾವಿನತ್ಯೆ' ಎಂಬ ಹ್ಯಾಕಥಾನ್ ವಿಷಯದ ಮೇಲೆ ಸಿಎಂಆರ್‌ಐಟಿ ವಿದ್ಯಾರ್ಥಿಗಳ ತಂಡವು ಕೋಡ್‌ಇಕೋ ಅಂತರ್ ಜಲ ನೀರನ್ನು ಪತ್ತೆ ಹಚ್ಚಲು ಸ್ಮಾರ್ಟ್ ಅಪ್ಲಿಕೇಶನ್ ಸಾಧನ ಅಭಿವೃದ್ಧಿ ಪಡಿಸಿ ಬಹುಮಾನ ಮುಡಿಗೇರಿಸಿಕೊಂಡಿದೆ. ಈ ಸಾಧನ ಸುಲಭವಾಗಿ ನೀರಿನ ಆಳ ಮತ್ತು ಬಂಡೆಯ ಪದರಗಳ ನಡುವೆ ಇರುವ ಅಂತರ್ ಜಲವನ್ನು ಪತ್ತೆಹಚ್ಚಿ ರೈತರಿಗೆ ಉಪಯುಕ್ತವಾಗಲಿದೆ. ಜೊತೆಗೆ ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿ ಉಪಗ್ರಹ ದತ್ತಾಂಶವನ್ನು ಮ್ಯಾಪಿಂಗ್ ಮಾಡುವುದರಿಂದ ಗ್ರಾಮ ಪಂಚಾಯಿತಿ ಮಟ್ಟದ ನೀರಿನ ಸಂರಕ್ಷಣೆಯನ್ನು ಶಕ್ತಗೊಳಿಸುತ್ತದೆ. ಈ ಮೂಲಕ ರೈತರಿಗೆ ಮತ್ತು ಸಮುದಾಯಕ್ಕೆ ಸಹಾಯ ಮಾಡುವ ಮಹತ್ವದ ಗುರಿ ಹೊಂದಿದ್ದು ರೈತರ ಬದುಕಿಗೆ ಈ ಸಾಧನವು ಸಹಾಯವಾಗಲಿದೆ.

ಸಿಎಂಆರ್‌ಐಟಿ ತಂಡವು ಆವಿಷ್ಕರಿಸಿರುವ ಈ ಸಾಧನವು ಕೃಷಿ ಸಮುದಾಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ ಎಂದು ಹ್ಯಾಕಥಾನ್ ಸ್ಪರ್ಧೆಯ ತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ.

ಈ ಸಾಧನವನ್ನು ಕಾಲೇಜಿನ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ 3 ಮತ್ತು 4ನೇ ವರ್ಷದ ವಿದ್ಯಾರ್ಥಿಗಳಾದ ಯಶ್ವಂತ್ ಜೈನ್,ಪ್ರತೀಕ್, ಮುಖೇಶ್ ಭರೂಕ, ವೈಷ್ಣವಿ ಪಾಟೀಲ್. ಅರ್ಪಣ್ ಅಭಿಷೇಕ್ ಮತ್ತು ಪಿ ಮೀರಾ ಕೃಷ್ಣ ಅವರನ್ನೊಳಗೊಂಡ ತಂಡ ವಿನ್ಯಾಸಗೊಳಿಸಿದೆ. ಇನ್ನು ವಿದ್ಯಾರ್ಥಿಗಳ ಈ ಪ್ರಯತ್ನವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಜಯ್ ಜೈನ್ ಹಾಗೂ ಅಧ್ಯಾಪಕರು ಶ್ಲಾಘಿಸಿದ್ದಾರೆ.

ಈ ಸೃಜನಾತ್ಮಕ ಯೋಜನೆ ರೈತ ಸಮುದಾಯಕ್ಕೆ ಕೃಷಿ ಕಾರ್ಯದಲ್ಲಿ ಸದುಪಯೋಗವಾಗುವುದೆಂಬ ಭರವಸೆಯನ್ನು ಪ್ರಾಂಶುಪಾಲರು ವ್ಯಕ್ತಪಡಿಸಿ ವಿದ್ಯಾರ್ಥಿಗಳು ಕೃಷಿರಂಗದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಆಶಾದಾಯಕ ಎಂದು ತಿಳಿಸಿದರು.

**DATE: 06-12-2020**
**Publication: Sanje Samaya Page -07**

# ಆನ್‌ಲೈನ್ ಹ್ಯಾಕಥಾನ್: ಸಿಎಂಆರ್‌ಐಟಿಗೆ ಪ್ರಶಸ್ತಿ

ಸಂಜೆ ಸಮಯ ಸುದ್ದಿ

ಬೆಂಗಳೂರು ಡಿ.05: ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಆನ್‌ಲೈನ್ ಹ್ಯಾಕಥಾನ್ (ಅಕ್ಸೆಲಾಥಾನ್ 2.0) ಸ್ಪರ್ಧೆಯಲ್ಲಿ ನಗರದ ಸಿಎಂಆರ್ ತಾಂತ್ರಿಕ ಕಾಲೇಜು (ಸಿಎಂಆರ್‌ಐಟಿ) ದ್ವಿತೀಯ ಬಹುಮಾನ ಪಡೆದಿದೆ.



ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ (ವಿಟಿಯು) ಸಹಯೋಗದಲ್ಲಿ ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಈ ಆನ್‌ಲೈನ್ ಹ್ಯಾಕಥಾನ್ ಸ್ಪರ್ಧೆಯಲ್ಲಿ 18 ರಾಜ್ಯಗಳ 40ಕ್ಕೂ ಹೆಚ್ಚು ಕಾಲೇಜುಗಳು ಪಾಲ್ಗೊಂಡಿದ್ದವು. ಈ ಕಾಲೇಜುಗಳ 92 ತಂಡಗಳ 400 ವಿದ್ಯಾರ್ಥಿಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಿದ್ದವು.

"ತಂತ್ರಜ್ಞಾನವನ್ನು ಬಳಸುವಲ್ಲಿ ಸಾಮಾಜಿಕ ನಾವೀನ್ಯತೆ" ಎಂಬ ವಿಷಯದ ಮೇಲೆ ಸಿಎಂಆರ್‌ಐಟಿ ವಿದ್ಯಾರ್ಥಿಗಳ ತಂಡವು ಅಂತರ್ಜಲವನ್ನು ಪತ್ತೆ ಹಚ್ಚಲು ಸ್ಮಾರ್ಟ್ ಅಪ್ಲಿಕೇಶನ್ ಅಭಿವೃದ್ಧಿ ಪಡಿಸಿದ್ದಕ್ಕಾಗಿ ದ್ವಿತೀಯ ಬಹುಮಾನ ಪಡೆಯಿತು. ಈ ಸಾಧನವು ಆಳ ಮತ್ತು ಬಂಡೆಯ ಪದರಗಳ ನಡುವೆ ಇರುವ ಅಂತರ್ಜಲವನ್ನು ಸುಲಭವಾಗಿ ಪತ್ತೆ ಹಚ್ಚುತ್ತದೆ. ಇದರಿಂದ ರೈತರಿಗೆ ಹೆಚ್ಚು ಪ್ರಯೋಜನವಾಗಲಿದೆ. ಜೊತೆಗೆ ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿ ಉಪಗ್ರಹ ದತ್ತಾಂಶವನ್ನು ಮ್ಯಾಪಿಂಗ್ ಮಾಡುವುದರಿಂದ ಗ್ರಾಮ ಪಂಚಾಯಿತಿ ಮಟ್ಟದ ನೀರಿನ ಸಂರಕ್ಷಣೆ ಕಾರ್ಯವನ್ನು ಬಲಗೊಳಿಸುತ್ತದೆ.

ಕಾಲೇಜಿನ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ 3 ಮತ್ತು 4ನೇ ವರ್ಷದ ವಿದ್ಯಾರ್ಥಿಗಳಾದ ಯಶವಂತ್ ಜೈನ್, ಪ್ರತೀಕ್, ಮುಖೇಶ್ ಭರೂಕ, ವೈಷ್ಣವಿ ಪಾಟೀಲ, ಅರ್ಪಣ್, ಅಭಿಷೇಕ್ ಮತ್ತು ಪಿ. ಮೀರಾ ಕೃಷ್ಣ ಅವರನ್ನೊಳಗೊಂಡ ತಂಡ ಈ ಸಾಧನವನ್ನು ವಿನ್ಯಾಸಗೊಳಿಸಿದೆ. ವಿದ್ಯಾರ್ಥಿಗಳ ಈ ಪ್ರಯತ್ನವನ್ನು ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ್ ಜೈನ್ ಹಾಗೂ ಅಧ್ಯಾಪಕರು ಶ್ಲಾಘಿಸಿದ್ದಾರೆ.